೧೦–೩೦ ಎ.ಎಂ.

3. ಮೈಸೂರು ನಗರದಲ್ಲಿನ ಸರ್ಕಾರಿ ಮುದ್ರಣಾಲಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡದಿರುವ ಬಗ್ಗೆ

ಶ್ರೀ ವೇದಾಂತ ಡೆವಿ ಮೈಗೆ.—ಮೈಸೂರು ನಗರದಲ್ಲಿನ ಸರ್ಕಾರಿ ಮುದ್ರಣಾಲಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ವಿಧಾನಸಭಾವಿಕಿ ಮಂತ್ರಿಗಳು).— ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ ಮೈಸೂರು ಇದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪಠ್ಯ ಪುಸ್ತಕ ನಿರ್ದೇಶನಾಲಯದ್ಕೆ ಆಡಳಿತ ವ್ಯಾಪ್ತಿಗೆ ಬರುವುದು.

ಪಠ್ಯ ಪುಸ್ತಕ ಮುದ್ರಣಾಲಯದಲ್ಲಿ ತಾಂತ್ರಿಕ ಹುದ್ದೆಗಳಿದ್ದು ಆವುಗಳನ್ನು ಮಾತ್ರ ಕೇಂದ್ರ ಮುದ್ರಣಾಲಯದ ನಿಯಮಗಳಂತೆ ವ್ಯವಹರಿಸಲು ಕಾರ್ಯಕಾರಿ ಆದೇಶವನ್ನು ಹೊರಡಿಸಿ ತಾತ್ಕಾಲಿಕವಾಗಿ ಅನುಸರಿಸಲಾಗುತ್ತಿತ್ತು. ಶಾಸನ ಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಹುದ್ದೆಗಳನ್ನು ತುಂಬುವುದೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶದಂತೆ ಸದರಿ ನಿಯಮಗಳನ್ನು ರಚಿಸಿ ನಿರ್ದೇಶಕರು ಈಗ ತಾನೆ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ಈಗಾಗಲೇ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಖಾಲಿ ಇರುವ ಹುದ್ದೆಗಳಲ್ಲಿ ೨೦ ವರ್ಷದ ಒಪ್ಪಂದದ ಪ್ರಕಾರ ಕೆಲಸ ಮಾಡಲು ಅಭ್ಯರ್ಥಿಗಳನ್ನು ನೇಮಿಸಿಕೊಂಡು ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದ ಮುದ್ರಣ ಶಕ್ತಿಯನ್ನು ಪೂರ್ತಿ ಉಪಯೋಗಿಸಿಕೊಂಡು ಮುದ್ರಣ ಕಾರ್ಯವನ್ನು ನಡೆಸಲಾಗುತ್ತಿದೆ.

ಪಠ್ಯಪುಸ್ತಕ ಮುದ್ರಣಾಲಯದಲ್ಲಿ ದಿನಗೂಲಿ ನೌಕರರ ನೇಮಕಾತಿ ವ್ಯವಸ್ಥೆ ಇರುವುದಿಲ್ಲ. ಈಗಾಗಲೇ ಕೆಲಸ ಮಾಡುತ್ತಿರುವ ಸದರಿ ಕೆಲಸಗಾರರು ಸಹ ವಿದ್ಯಾರ್ಹತೆ ಮತ್ತು ಅನುಭವಗಳೊಂದಿಗೆ ಶಾಸನ ಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದನಂತರ ಬಹಿರಂಗ ನೇಮಕಾತಿಯ ವ್ಯವಸ್ಥೆಯಲ್ಲಿ ಭಾಗವಹಿಸಲು ಅಭ್ಯಂತರವಿರುವುದಿಲ್ಲ. ಆದ್ದರಿಂದ ಅಲ್ಲಿನ ಯಾವ ವಿಧವಾದ ತಾತ್ಕಾಲಿಕ ಕೆಲಸಗಾರರ ಖಾಯಂ ವ್ಯವಸ್ಥೆ ಉದ್ಭವಿಸುವುದಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಅರ್ಹತೆ ಬಂದರೆ, ವಿದ್ಯಾರ್ಹತೆಗಳಿದ್ದರೆ, ಶಾಸನಬದ್ಧವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರ ಅವರು ಬಹಿರಂಗವಾಗಿ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಳ್ಳಬಹುದೆಂದು ಹೇಳಿದ್ದಾರೆ, ನಾನು ಕೇಳಬೇಕಾದ ಪ್ರಶ್ನೆ ಇಷ್ಟೆ. ಸರ್ಕಾರಿ ಮುದ್ರಣಾಲಯದಲ್ಲಿರತಕ್ಕ ನೌಕರರಿಗೆ, ಅದೇ ರೀತಿ ಯಾವುದೇ ಮುದ್ರಣಾಲಯದಲ್ಲಿ ಇರತಕ್ಕ ನೌಕರರಿಗೆ ಕನಿಷ್ಟ ವೇತನ ಕಾಯಿದೆ ಜಾರಿಯಲ್ಲಿದೆ. ಈ ಒಂದು ಮುದ್ರಣಾಲಯದಲ್ಲಿ ಸುಮಾರು ೨೦೦ ಕೆಲಸಗಾರರು ಕಳೆದ ೧೦ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರ ವಯಸ್ಸನ್ನು ಈಗ ೪೦–೪೫ರ ವರೆಗೆ ಮುಟ್ಟಿದೆ. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಬೆಂಗಳೂರಿನಲ್ಲಿರತಕ್ಕ ಕೇಂದ್ರ ಮುದ್ರಣಾಲಯಲ್ಲಿ ಕೆಲಸ ಮಾಡತಕ್ಕ ದಿನಗೂಲಿ ನೌಕರರಿಗೆ ೫೧೮ ರೂಪಾಯಿಗಳಂ ಪ್ಲಸ್ ಡಿ.ಎ. ಸೇರಿಸಿ ಸಂಬಳವನ್ನು ಸರ್ಕಾರಿ ಆದೇಶದ ಪ್ರಕಾರ ಕೊಡುತ್ತಿದ್ದಾರೆ. ಇವರು ಈ ಮುದ್ರಣಾಲಯದಲ್ಲಿ ಕಳೆದ ೧೦ ವರ್ಷಗಳಿಂದ ಕೆಲಸಮಾಡಿದ್ದಾರೆ. ಅವರಿಗೆ ೩೬೪ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅವರಿಗೆ ವೇತನ ಕೊಡುತ್ತಿಲ್ಲ, ಭತ್ಯ ಕೊಡುತ್ತಿಲ್ಲ Is not Government violating its own minimum wages act so far as Governemnt Press, Mysore is concerned ?

ಶ್ರೀ ಎಂ. ರಘುಪತಿ.—ವ್ಯತ್ಯಾಸ ಅದು ಹೊಸದೇನು ಅಲ್ಲ, ಅದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಸಂಬಂಧಪಟ್ಟ ಶಾಸಕರು ಮಂತ್ರಿ ಇಲಾಖೆಯವರನ್ನು ಕರೆಯಿಸಿ ಸಮಾಲೋಚನೆ ಮಾಡಿ ಒಂದು ಪರಿಹಾರ ಕಂಡುಹಿಡಿಯಲಿಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಈ ಪ್ರಶ್ನೆಯನ್ನು ಕೇಳುತ್ತಿರುವುದು ಕಾರ್ಮಿಕರ ಮಾನವೀಯತೆಯ ದೃಷ್ಟಿಯಿಂದ ; ಆವರ ಹಿತದೃಷ್ಟಿಯಿಂದ. ಅವರು ಸರ್ಕಾರಿ ಮುದ್ರಣಾಲಯದಲ್ಲಿ ೧೦ ವರ್ಷಗಳಿಂದ ದುಡಿದಿದ್ದಾರೆ. ಅವರನ್ನು ಖಾಯಂ ಮಾಡಿಯೆಂದು ನಾನಂ ಕೇಳುತ್ತಿಲ್ಲ. ಅವರಿಗೆ ಹೊರಕ ಬೇಕಾದ ೫೧೮ ರೂಪಾಯಿಗಳನ್ನು ಕೊಡಬೇಕು. ಇದೇರೀತಿ ಕೆಲಸಮಾಡತಕ್ಕವರಿಗೆ ಬೆಂಗಳೂರಿನಲ್ಲಿ ೫೧೮ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆ ವೇತನವನ್ನು ನಮಗೂ ಕೊಡಿಯೆಂದೂ ಮೈಸೂರಿನಲ್ಲಿರ ತಕ್ಕವರು ಕೇಳುತ್ತಿದ್ದಾರೆ. ಈಗ ಅವರಿಗೆ ೩೬೪ ರೂಪಾಯಿಗಳು ಮಾತ್ರ ದೊರೆಯುತ್ತಿವೆ. ಅವರಂ ಮಿನಿಮಮ್ ವೇಜಸ್ ಏನಿದೆ ಅದನ್ನು ಕೇಳುತ್ತಿದ್ದಾರೆ. ಮಿನಿಮಮ್ ವೇಜಸ್ ಪ್ರಕಾರ ಅವರಿಗೆ ೫೧೮ ರೂಪಾಯಿಗಳು ದೊರೆಯಬೇಕು. ಬೆಂಗಳೂರಿನಲ್ಲಿ ಅದೇರೀತಿ ಕೆಲಸಮಾಡತಕ್ಕವರಿಗೆ ೫೧೮ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಮೈಸೂರಿನಲ್ಲಿರತಕ್ಕವರಿಗೆ ಅದನ್ನು ಕೊಡಬೇಕೆಂದು ಒತ್ತಾಯಿಸು ತ್ತಿದ್ದೇವೆ. ದಯವಾಡಿ ಈ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಐ. ಬಿ. ಶಂಕರ್ —ಮಾನ್ಯಮಂತ್ರಿಗಳು ಹತ್ತಾರು ವರ್ಷಗಳಿಂದ ಇದು ನಡೆದುಕೊಂಡು ಬಂದ ವಿಷಯವೆಂದು ಹೇಳಿದ್ದಾರೆ. ಅದು ಖಾಸಗೀ ಸಂಸ್ಥೆಯಲ್ಲ, ಬೆಂಗಳೂರಿನಲ್ಲಿ ಒಂದು, ಮಂಡ್ಯ ದಲ್ಲೊಂದು, ಚಿಕ್ಕಮಗಳೂರಿನಲ್ಲೊಂದು ಎಂದು ಹೇಳುವುದಕ್ಕೆ ಆಗುವುದಿಲ್ಲ ಸರ್ಕಾರ ಒಂದು ತೀರ್ಮಾ ನವನ್ನು ತೆಗೆದುಕೊಂಡ ಮೇಲೆ, ಸರ್ಕಾರದ ನಿಲುವು ಏನಿದೆ ಅದನ್ನು ಎಲ್ಲಾ ಕಡೆಗೂ ಅನ್ವಯಿಸ ಬೇಕಾಗುತ್ತದೆ. ಮಾನ್ಯ ವೇದಾಂತ ಹೆಮ್ಮಿಗೆಯವರ ಕಳಕಳಿಯನ್ನು ಅರ್ಥಮಾಡಿಕೊಂಡು ಕೂಡಲೇ ಸರ್ಕಾರ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ ಟಿ. ಜಯಕುಮಾರ್.—ಬೆಂಗಳೂರಿನಲ್ಲಿರತಕ್ಕ ಮುದ್ರಣಾಲಯ, ಮೈಸೂರಿನಲ್ಲಿರತಕ್ಕ ಮುದ್ರಣಾಲಯಕ್ಕೆ ಒಬ್ಬರೆ ಡೈರೆಕ್ಟರ್. ಆದ್ದರಿಂದ ಬೆಂಗಳೂರಿನಲ್ಲಿ ಏನಿದೆ ಅದು ಮೈಸೂರಿಗೂ ಅನ್ವಯವಾಗುತ್ತದೆ. ಅಲ್ಲೊಂದು ಇಲ್ಲೊಂದು ಮಾಡುವುದಕ್ಕೆ ಬರುವುದಿಲ್ಲ,ಮೈಸೂರಿನಲ್ಲಿರತಕ್ಕವರಿಗೆ ಅನ್ಯಾಯವಾಗಿದೆ. ಅವರು ಇಲ್ಲಿಯತನಕ ಕೇಳದೆ ಇರುವುದು ದೊಡ್ಡ ತಪ್ಪು. ಈಗ ಇರತಕ್ಕ ತಾರತಮ್ಯವನ್ನು ಹೋಗಲಾಡಿಸಿ, ಇಬ್ಬರಿಗೂ ಒಂದೇ ವೇತನ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿ ಇಲ್ಲದೆ ಇರುವುದರಿಂದ, ನಾನು ಈಗಾಗಲೇ ಹೇಳಿದ್ದೇನೆ ಸಂಬಂಧಪಟ್ಟ ಕೆಲಸಗಾರರನ್ನೂ ಹಾಗೂ ಶಾಸಕರನ್ನು ಕರೆದು ಒಂದು ಸಭೆಯನ್ನು ಮಾಡಿ ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ, ಒಂದು ಖಾಯಂ ವ್ಯವಸ್ಥೆಯನ್ನು ಏರ್ಪಾಡು ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.— ಹೊಸದಾಗಿ ವೇತನ ಕೊಡಿಯೆಂದು ಕೇಳುತ್ತೇವೆಯು ? Minimum Wages Act is under force now. which the Government has been framed, and bring implemented in private press as well as Government Press. I want the Government to implim nt what is now implemented in Government Press, Bangalore. It is a gross violation of the Act. I want to tell you frantly the Government can be prosecuted for such violations. Is should not be done, I don't want that. I any request the Government to implement the Minimum Wages Act ie.. what they have enforced for the daily wage workers in Bangalore, the same may be given to the employees of Mysore City numbering about 200, who have put in 10 years of service. I want a categorical Assurance from the Hon'ble Minister Stating that the

that the same Minimum Wages Act will be enforced even in Mysore Press.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ ಕಾರ್ಮಿಕ ಇಲಾಖೆಯ ಮಂತ್ರಿಗಳ ಜೊತೆ ಚರ್ಚೆ ಮಾಡಿ, ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತೇನೆ.

ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ನನ್ನ ಭಾಷಣದಲ್ಲಿ ಪ್ರಾಪ ಮಾಡುತ್ತಾ ಐ.ಎ.ಎಸ್. ಐ.ಪಿ.ಎಸ್ ಮಂತ್ರಿ ಐ.ಎಫ್.ಎಸ್. ಮತ್ತು ಸರ್ಕಾರಿ ಅಧಿಕಾರಿಗಳ ಬಗ್ಗೆ ರೆಫರ್ ಮಾಡಿದ್ದೆ. ನನ್ನ ಉದ್ದೇಶ ಏನು ಇತ್ತು ಎಂದರೆ ಈ ಸರ್ಕಾರ ಯಾವರೀತಿ ನಡೆಯುತ್ತಿದೆ ಎನ್ನುವುದಕ್ಕೆ ಕೆಲವು ವಿಷಯಗಳನ್ನು ಹೇಳಬೇಕಾಗಿರುವುದು. ಈಗ ನಮ್ಮಲ್ಲಿ ನಾಲ್ಕು ಚೀಫ್ ಇಂಜಿನಿಯರ್‌ಗಳು ಇದ್ದವರು ಶ್ರೀ ದೇವೇಗೌಡರ ಕಾಲದಲ್ಲಿ ೩೨ ಜನ ಆಗಿದ್ದಾರೆ ಇದಕ್ಕೆ ಏನು ಕಾರಣ ಎಂದರೆ, ಯಾರಾದರೂ ಗೊಡ್ಡು ಮನುಷ್ಯರ, ಒಬ್ಬ ಮಂತ್ರಿಯ ಅಳಿಯ ಪ್ರಮೋಶನ್ ಬೇಕು ಎಂದರೆ ಪ್ರಮೋಶನ್ ಕೊಡಲಿಕ್ಕೆ ಒಂದು ಜಾಗವನ್ನು ಸೃಷ್ಟಿ ಮಾಡುವುದು ಈ ರೀತಿಯಾಗಿದೆ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ೩ ಜನರಿದ್ದಾರೆ, ಸೆಕ್ರೆಟರಿಗಳು ಮೊದಲು ೩ ಜನ ಇದ್ದರು, ಅದರ ಜೊತೆಗೆ ಈಗ ೨೦ ಸೇರಿಸಿದ್ದಾರೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟನ್ನು ಮೂರು ಭಾಗ ಮಾಡಿದ್ದಾರೆ. ಅದನ್ನು ಸಿರಿಕಲ್ಚರ್, ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಎಂದು ಭಾಗ ಮಾಡಿದ್ದು ಇವುಗಳಲ್ಲಿ ಬರೀ ಸಂಬಳ ಸಾರಿಗೆಗಾಗಿ ೫೦ ಪರ್ಸೆಂಟ್‌ನಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಎಲ್ಲದಕ್ಕೂ ಒಬ್ಬೊಬ್ಬ ಡೈರೆಕ್ಟರ್ ಇದ್ದಾರೆ ಜಾಯಿಂಟ್ ರಿಜಿಸ್ಟ್ರಾರ್‌ಗಳು ೨೬ ಜನ ಇದ್ದಾರೆ. ಇರಬೇಕಾಗಿರುವುದು ೩ ಜನ. ಹಾಗೆಯೇ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಡೈರೆಕ್ಟರ್ ಇದ್ದುದನ್ನು ಮೂರು ಮಾಡಿದ್ದಾರೆ. ಇ.ಎಸ್.ಐ ಗೆ ಒಬ್ಬ ಡೈರೆಕ್ಟರ್, ಹೆಲ್ತ್‌ಗೆ ಒಬ್ಬ ಡೈರೆಕ್ಟರ್ ಮತ್ತು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಎಂದು ಒಬ್ಬರು. ಈ ರೀತಿ ವಿಪರೀತವಾಗಿ ಡಿಪಾರ್ಟ್‌ಮೆಂಟ್‌ಗಳನ್ನು ಸೃಷ್ಟಿ ಮಾಡಿ ಹಣಕಾಸಿನ ಪರಿಸ್ಥಿತಿಯಲ್ಲಿ ಒತ್ತಡ ನಮಗೆ ಬರುತ್ತಿರುವ ಉತ್ಪಾದನೆಯಲ್ಲಿ ೧೩೦ ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಕೊಡುತ್ತಾರೆ. ಸಂಬಳದ ಜೊತೆಗೆ ಸಂಮಾರು ೨೭ ಲಕ್ಷ ರೂಪಾಯಿಗಳನ್ನು ಇದಕ್ಕೆ ಸೇರಿಸಬೇಕಾಗುತ್ತದೆ. ಇವರ ಕಾರು ಒಬ್ಬೊಬ್ಬರ ಮನೆಯಲ್ಲಿ ಮೂರು–ನಾಲ್ಕು ಮಂದಿ ಕೆಲಸ ಮಾಡುವ ಆಳುಗಳು ಎಲ್ಲಾ ಸೇರಿದರೆ ಇಷ್ಟೊಂದು ಹಣವನ್ನು ಈ ಅಧಿಕಾರಿಗಳ ಸಂಬಳ ಮತ್ತಿತರ ಸೌಲಭ್ಯಗಳಿಗಾಗಿ ಖರ್ಚು ಮಾಡಿದರೆ ಹೇಗೆ ? ಇವೆಲ್ಲಾ ನಾನ್ ಪ್ಲಾನ್‌ನಲ್ಲಿ ಬರುವಂಥಾದ್ದು. ಅರ್ಧಕ್ಕಿಂತ ಜಾಸ್ತಿ ಹಣ ಸಂಬಳ ಸಾರಿಗೆಗಳಿಗೇ ಖರ್ಚಾಗುತ್ತಿದೆ. ಏಕೆಂದರೆ ನಮ್ಮ ಸರ್ಕಾರದವರು ಈ ಐ.ಎ ಎಸ್ ಅಧಿಕಾರಿಗಳ ಒತ್ತಡಕ್ಕೆ ಮಣಿದು ಅವರಿಗೆ ಪ್ರಮೋಶನ್ ಕೊಡಬೇಕೆಂಬ ಉದ್ದೇಶದಿಂದ ಅವರಿಗೆ ಕೊಡುತ್ತಿರುವ ಸದಾವಕಾಶವನ್ನು ದುರುಪಯೋಗ ಮಾಡಿಕೊಂಡು ದಿನದಿನ ಡಿಪಾರ್ಟ್‌ಮೆಂಟ್‌ಗಳನ್ನು ಜಾಸ್ತಿ ಮಾಡಿ ಸರ್ಕಾರಕ್ಕೆ ಬರುತ್ತಿರುವ ಒಟ್ಟು ಆದಾಯದಲ್ಲಿ ಅರ್ಧಭಾಗವನ್ನು ಇವರಿಗಾಗಿ ಖರ್ಚು ಮಾಡುತ್ತಿದ್ದಾರೆ. ಇದು ತುಂಬಾ ಅನ್ಯಾಯ. ಇದನ್ನು ನೋಡಿದರೆ ಕರ್ನಾಟಕದಲ್ಲಿ ಫೈನಾನ್ಸಿಯಲ್ ಕ್ರೈಸಿಸ್ ಇದಕ್ಕಾಗಿಯೇ ಆಯಿತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಈ ಫೈನಾನ್ಸಿಯಲ್ ಕ್ರೈಸಿಸ್ ಅನ್ನು ಒಪ್ಪಿಕೊಳ್ಳುವಾಗ ನನಗೆ ಒಂದು ಅನುಮಾನ ಬರುತ್ತದೆ, ಇಲ್ಲಿ ಯಾರೂ ಕೂಡ ನಾನು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಾ ಇಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಮಾನ್ಯ ಮಂತ್ರಿಗಳು ಮಾತನಾಡುವುದರಲ್ಲಿ ಅವರ ಸಂಧಾನಗಳಲ್ಲಿ ನಿರತರಾಗಿದ್ದಾರೆ. ಸರ್ಕಾರವನ್ನು ಪ್ರತಿನಿಧಿಸುವವರು ಯಾರಿದ್ದಾರೆ ಇಲ್ಲಿ ?

ಶ್ರೀ ವೀರಣ್ಣ.—ಆರೋಗ್ಯ ಮಂತ್ರಿಗಳು ತಾವು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.